# ಹರಿಕಥಾಮೃತಸಾರ - ೧೫

## ಶ್ವಾಸ ಸಂಧಿ

ಹರಿಕಥಾಮೃತಸಾರ ಗುರುಗಳ । ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥

ಭಾರತೀಶನು ಘಳಿಗೆಯೊಳು ಮು।ನ್ನೂರಆರುವತ್ತುಸಿರು ಜಪಗಳ ।
ತಾ ರಚಿಸುವನು ಸರ್ವಜೀವರೊಳಿದ್ದು ಬೇಸರದೆ ॥
ಕಾರುಣಿಕನವರವರ ಸಾಧನ । ಪೂರೈಸಿ ಭೂ ಸ್ವರ್ಗ ನರಕವ ।
ಸೇರಿಸುವ ಸರ್ವಜ್ಞ ಸಕಲೇಷ್ಟಪ್ರದಾಯಕನು ॥ ॥೧೫-೦೧॥

ತಾಸಿಗೊಂಭೈನೂರು ಶ್ವಾಸೋ।ಚ್ಛ್ವಾಸಗಳ ನಡೆಸುತಲಿ ಚೇತನ ।
ರಾಶಿಯೊಳು ಹಗಲಿರುಳು ಜಾಗೃತನಾಗಿ ನಿತ್ಯದಲಿ ॥
ಈ ಸುಮನಸೋತ್ತಂಸ ಲೇಶಾ।ಯಾಸವಿಲ್ಲದೆ ಪೋಷಿಸುತ ಮೂ ।
ಲೇಶನಂಘ್ರಿಸರೋಜಮೂಲದಲಿಪ್ಪ ಕಾಣಿಸದೆ ॥ ॥೧೫-೦೨॥

ಅರಿವುದೊಂದ್ಯಾಮದೊಳು ಶ್ವಾಸಗ।ಳೆರಡುಸಾವಿರದೇಳುನೂರನು ।
ಶರಸಹಸ್ರದ ಮೇಲೆ ನಾನೂರಹವು ದ್ವಿತಿಯಕ್ಕೇ ॥
ಮರಳಿ ಯಾಮತ್ರಯಕೆ ವಸುಸಾ।ವಿರದ ಮೇಲ್ನೂರೆಣಿಕೆಯಲಿ ಹ ।
ನ್ನೆರಡು ತಾಸಿಗೆ ಹತ್ತುಸಾವಿರದೆಂಟು ನೂರಹವು ॥ ॥೧೫-೦೩॥

ಒಂದು ದಿನದೊಳಗನಿಲ  ಇಪ್ಪ।ತ್ತೊಂದುಸಾವಿರದಾರುನೂರು ಮು ।
ಕುಂದುನಾಜ್ಞದಿ ಮಾಡಿ ಮಾಡಿಸಿ ಲೋಕಗಳ ಪೊರೆವ ॥
ನೆಂದು ಪವನನ ಪೊಗಳುತಿರು ಎಂ।ದೆಂದು ಮರೆಯದೆ ಈ ಮಹಿಮೆ ಸಂ ।
ಕ್ರಂದನಾದ್ಯರಿಗುಂಟೆ ನೋಡಲು ಸರ್ವಕಾಲದಲಿ ॥ ॥೧೫-೦೪॥

ಮೂರು ಲಕ್ಷದ ಮೇಲೆ ವಿಂಶತಿ । ಈರೆರಡುಸಾವಿರವು ಪಕ್ಷಕೆ ।
ಆರುಲಕ್ಷದ ಮೇಲೆ ನಾಲ್ವತ್ತೆಂಟುಸಾವಿರವು ॥
ಮಾರುತನು ಮಾಸಕೆ ಜಪಿಸಿ ಸಂ।ಸಾರಸಾಗರದಿಂದ ಸುಜನರ ।
ಪಾರುಗಾಣಿಸಿ ಸಲಹುವನು ಬಹುಭೋಗಗಳನಿತ್ತು ॥ ॥೧೫-೦೫॥

ಎರಡು ತಿಂಗಳಿಗಹವು ಋತು ಭೂ।ಸುರರು ತಿಳಿವದು ಶ್ವಾಸಜಪ ಹ ।
ನ್ನೆರಡುಲಕ್ಷದ ಮೇಲೆ ತೊಂಭತ್ತಾರುಸಾಹಸ್ರ ॥
ಕರೆಸುವದು ಅಯನಾಹ್ವಯದಲರೆ । ವರುಷ ಮೂವತ್ತೆಂಟುಲಕ್ಷೋ ।
ಪರಿ ತಿಳಿವುದೆಂಭತ್ತು ಎಂಟುಸಹಸ್ರ ಕೋವಿದರು ॥ ॥೧೫-೦೬॥

ವರುಷಕಿದರಿಮ್ಮಡಿ ಜಪಂಗಳ । ಗುರುವರ್ಯ ತಾ ಮಾಡಿ ಮಾಡಿಸಿ ।
ದುರಿತಗಳ ಪರಿಹರಿಸುವನು ಚಿಂತಿಸುವ ಸಜ್ಜನರ ॥
ಸುರವಿರೋಧಿಗಳೊಳಗೆ ನೇಲೆಸಿ।ದ್ದರವಿದೂರ ತಮೋಧಿಕಾರಿಗ ।
ಳಿರವರಿತು ಸೋಹಮ್ಮುಪಾಸನೆ ಮಾಳ್ಪನವರಂತೆ ॥ ॥೧೫-೦೭॥

ಇನಿತುಪಾಸನೆ ಸರ್ವಜೀವರೊ।ಳನಿಲದೇವನು ಮಾಡುತಿರೆ ।
ಚಿಂತನೆಯ ಮಾಡದೆ ಕಂಡ ನೀರೊಳು ಮುಳುಗಿ ನಿತ್ಯದಲಿ ॥
ಮನೆಯೊಳಗೆ ಕೃಷ್ಣಾಜಿನಾದ್ಯಾ।ಸನದಿ ಕುಳಿತು ವಿಶಿಷ್ಟ ಬಹು ಸ ।
ಜ್ಜನನೆನಿಸಿ ಜಪಮಣಿಗಳೆಣಿಸಿದರೇನು ಬೇಸರದೆ ॥ ॥೧೫-೦೮॥

ಓದನೋದಕ ಎರಡು ತೇಜದೊ।ಳೈದುವವು ಲಯ ತದಭಿಮಾನಿಗ ।
ಳಾದ ಶಿವಪವನರು ರಮಾಧೀನತ್ವ ಐದುವರು ॥
ಈ ದಿವಿಜರೊಡಗೂಡಿ ಶ್ರೀ ಮಧು।ಸೂದನನ ಐದುವಳ ಎಂದರಿ ।
ದಾದರದಲನ್ನೊದಕವ ಕೊಡುತುಣುತ ಸುಖಿಸುತಿರು ॥ ॥೧೫-೦೯॥

ಜಾಲಿತೊಪ್ಪಲಜಾವಿಗಳು ಮೆ।ದ್ದಾಲಯದಿ ಸ್ವೇಚ್ಛಾನುಸಾರದಿ ।
ಪಾಲಗರೆವಂದದಲಿ ಲಕುಮೀರಮಣ ತನ್ನವರ ॥
ಕೀಳುಕರ್ಮವ ಸ್ವೀಕರಿಸಿ ತ।ನ್ನಾಲಯದೊಳಿಟ್ಟವರ ಪೊರೆವ ಕೃ ।
ಪಾಳು ಕಾಮದ ಕೈರವದಳಶ್ಯಾಮ ಶ್ರೀರಾಮ ॥ ॥೧೫-೧೦॥

ಶಶಿದಿವಾಕರ-ಪಾವಕರೊಳಿಹ । ಅಸಿತ ಸಿತ ಲೋಹಿತಗಳಲಿ ಶಿವ ।
ಶ್ವಸನ ಭಾರ್ಗವಿ ಮೂವರೊಳು ಶ್ರೀಕೃಷ್ಣ ಹಯವದನ ॥
ವಸುಧಿಪಾರ್ದನ ತ್ರಿವೃತು ಎನಿಸಿ । ವಸುಮತಿಯೊಳನ್ನೋದಕಾನಳ ।
ಪೆಸರಿಂನಿಂದಲಿ ಸರ್ವಜೀವರ ಸಲಹುವನು ಕರುಣಿ ॥॥೧೫-೧೧॥

ದೀಪ ಕರದಲಿ ಪಿಡಿದು ಕಾಣದೆ । ಕೂಪದೊಳು ಬಿದ್ದಂತೆ ವೇದಮ ।
ಹೋಪನಿಷದರ್ಥಗಳ ನಿತ್ಯದಿ ಪೇಳುವವರೆಲ್ಲ ॥
ಶ್ರೀಪವನಮುಖವಿನುತನಮಲ ಸು।ರೂಪಗಳ ವ್ಯಾಪಾರ ತಿಳಿಯದೆ ।
ಪಾಪಪುಣ್ಯಕೆ ಜೀವ ಕರ್ತೃಅಕರ್ತೃ ಹರಿಯೆಂಬ ॥ ॥೧೫-೧೨॥

ಆನಿಲದೇವನು ವಾಙ್ಮನೋಮಯ।ನೆನಿಸಿ ಪಾವಕ ವರುಣ ಸಂಕ್ರಂ ।
ದನಮುಖಾದ್ಯರೊಳಿದ್ದು ಭಗವದ್ರೂಪಗುಣಗಳನು ॥
ನೆನೆನೆನೆದು ಉಚ್ಚರಿಸುತಲಿ ನ।ಮ್ಮನು ಸದಾ ಸಂತೈಸುವನು ಸ ।
ನ್ಮುನಿಗಣಾರಾಧಿತಪದಾಂಬುಜ ಗೋಜ ಸುರರಾಜ ॥ ॥೧೫-೧೩॥

ಪಾದವೆನಿಪವು ವಾಙ್ಮನೋಮಯ । ಪಾದರೂಪದ್ವಯಗಳೊಳು ಪ್ರ ।
ಲ್ಹಾದಪೋಷಕ ಸಂಕರುಷಣಾಹ್ವಯದಿ ನೆಲೆಸಿದ್ದು ॥
ವೇದಶಾಸ್ತ್ರ ಪುರಾಣಗಳ ಸಂ।ವಾದರೂಪದಿ ಮನನಗೈವುತ ।
ಮೋದಮಯ ಸುಖವಿತ್ತು ಸಲಹುವ ಸರ್ವಸಜ್ಜನರ ॥ ॥೧೫-೧೪॥

ಗಂಧವಹ ದಶದಿಶೇಗಳೊಳಗರ।ವಿಂದಸೌರಭ ಪಸರಿಸುತ ಘ್ರಾ ।
ಣೇಂದ್ರಿಯಗಳಿಗೆ ಸುಖವನೀವುತ ಸಂಚರಿಸುವಂತೆ ॥
ಇಂದಿರೇಶನ ಸುಗುಣಗಳ ದೈ।ನಂದಿನದಿ ತುತಿಸುತನುಮೋದಿಸು ।
ತಂಧ ಬಧಿರ ಸುಮೂಕನಂತಿರು ಮಂದಜನರೊಡನೆ ॥ ॥೧೫-೧೫॥

ಶ್ರೀ ರಮಣನರಮನೆಯ ಪೂರ್ವ।ದ್ವಾರದಲ್ಲಿಹ ಸಂಜ್ಞಸೂರ್ಯಗ ।
ಭಾರತೀಪತಿಪ್ರಾಣನೊಳಗಿಹ ಲಕುಮಿನಾರಯಣನ ॥
ಸೇರಿ ಮನುಜೋತ್ತಮರು ಸರ್ವಶ।ರೀರಗತ ನಾರಾಯಣನ ಅವ ।
ತಾರಗುಣಗಳ ತುತಿಸುತಲಿ ಮೋದಿಪರು ಮುಕ್ತಿಯಲಿ ॥ ॥೧೫-೧೬॥

ಪ್ರಣವಪ್ರತಿಪಾದ್ಯನ ಪುರದ ದ।ಕ್ಷಿಣ ಕವಾಟದಲಿಪ್ಪ ಶಶಿರೋ ।
ಹಿಣಿಗತ ವ್ಯಾನಸ್ಥ ಕೃತಿಪ್ರದ್ಯುಮ್ನ ರೂಪವನು ॥
ಗುಣಗಳನು ಸಂತುತಿಸುತಲಿ ಪಿತೃ।ಗಣ ಗದಾಧರನತಿವಿಮಲ ಪ ।
ಟ್ಟಣದೊಳಗೆ ಸ್ವೇಚ್ಛಾನುಸಾರದಿ ಸಂಚರಿಸುತಿಹರು ॥ ॥೧೫-೧೭॥

ಅಮಿತವಿಕ್ರಮನಾಲಯದ ಪ।ಶ್ಚಿಮ ಕವಾಟದಿ ಸತಿಸಹಿತ ಸಂ ।
ಭ್ರಮದಿ ಭಗವದ್ಗುಣಗಳನೆ ಪೊಗಳುತಲಿ ಮೋದಿಸುವ ॥
ಸುಮನಸಾಸ್ಯನೊಳಿಪ್ಪಪಾನಗ । ದಮನಸಂಕರುಷಣನ ನಿಜ ಹೃ ।
ತ್ಕಮಲದೊಳುಧೇನಿಸುವ ಋಷಿಗಣ ಐದಿಸುಖಿಸುವರು ॥ ॥೧೫-೧೮॥

ಸ್ವರಮಣನ ಗುಣರೂಪ ಸಪ್ತ।ಸ್ವರಗಳಿಂದಲಿ ಪಾಡುತಿಹ ತುಂ ।
ಬುರನೆ ಮೊದಲಾದಖಿಳ ಗಂಧರ್ವರು ರಮಾಪತಿಯ ॥
ಪುರದ ಉತ್ತರಬಾಗಿಲಾಧಿಪ । ಸುರಪಶಚಿಗಸಮಾನವಾಯುಗ ।
ಹರಿನ್ಮಣಿನಿಭ ಶಾಂತಿಪತಿಯನಿರುದ್ಧನೈದುವರು ॥ ॥೧೫-೧೯॥

ಗರುಡಶೇಷಮರೇಂದ್ರಮುಖ ಪು।ಷ್ಕರನೆ ಕಡೆಯಾಗಿಪ್ಪಖಿಳ ನಿ ।
ರ್ಜರರು ಊರ್ಧ್ವದ್ವಾರಗತ ಭಾರತಿ ಉದಾನದೊಳು ॥
ಮೆರೆವ ಮಾಯಾವಾಸುದೇವನ । ಪರಮಮಂಗಳವಯವಗಳ ಮಂ ।
ದಿರವನೈದಿ ಸದಾ ಮುಕುಂದನ ನೋಡಿ ಸುಖಿಸುವರು ॥ ॥೧೫-೨೦॥

ದ್ವಾರಪಂಚಕಪಾಲಕರೊಳಿಹ । ಭಾರತೀಪ್ರಾಣಾಂತರಾತ್ಮಕ ।
ಮಾರಮಣನೈರೂಪ ತತ್ತದ್ವಾರದಲಿ ಬಪ್ಪ ।।
ಮೂರೆರಡುವಿಧ ಮುಕ್ತಿಯೋಗ್ಯರ । ತಾರತಮ್ಯವನರಿತವರ ಕಂ ।
ಸಾರಿ ಸಂಸಾರಾಬ್ಧಿ ದಾಟಿಸಿ ಮುಕ್ತರನು ಮಾಳ್ಪ ।। ।।೧೫-೨೧।।

ಬೆಳಗಿದ್ದೂಜಿಯು ನೋಳ್ಪರಿಗೆ ಥಳ।ಥಳಿಸುತಲಿ ಕಂಗೊಳಿಸುವಂದದಿ ।
ತೊಳಿದು ದೇಹವ ನಾಮಮುದ್ರೆಗಳಿಂದಲಂಕರಿಸಿ ।।
ಒಲಿಸಿ ನಿತ್ಯ ಕುತರ್ಕಯುಕ್ತಿಗ।ಳಲವಬೋಧರ ಶಾಸ್ತ್ರ ಮರ್ಮವ ।
ತಿಳಿಯದಿಹ ನರ ಬರಿದೆ ಇದರೊಳು ಶಂಕಿಸಿದರೇನು ।। ।।೧೫-೨೨।।

ಉದಧಿಯೊಳು ಊರ್ಮಿಗಳು ತೋರ್ಪಂ।ದದಲಿ ಹಂಸೋದ್ಗೀಥಹರಿಹಯ ।
ವದನ ಕೃಷ್ಣಾದ್ಯಮಿತನವತಾರಗಳು ನಿತ್ಯದಲಿ ।।
ಪದುಮನಾಭನೊಳಿರುತಿಹವು ಸ।ರ್ವದ ಸಮಸ್ತಪ್ರಾಣಿಗಳ ಚಿದ್ ।
ಹೃದಯಗತ ರೂಪಗಳನವ್ಯವಧಾನದಲಿ ಬಿಡದೆ ।। ।।೧೫-೨೩।।

ಶರಧಿಯೊಳು ಮಕರಾದಿಜೀವರು । ಇರುಳುಹಗಲೇಕಪ್ರಕಾರದಿ ।
ಚರಿಸುತನುಮೋದಿಸುತ ಇಪ್ಪಂದದಿ ಜಗತ್ರಯವು ।।
ಇರುತಿಹವು ಜಗದೀಶನುದರದಿ । ಕರೆಸುವದು ಪ್ರತಿಬಿಂಬನಾಮದಿ ।
ಧರಿಸಿಹುದು ಹರಿನಾಮರೂಪಂಗಳನು ಅನವರತ ।। ।।೧೫-೨೪।।

ಜನನಿ ಸೌಷ್ಠಪದಾರ್ಥಗಳ ಭೋ।ಜನವ ಮಾಡಲು ಗರ್ಭಗತಶಿಶು ।
ದಿನದಿನದಲಭಿವೃದ್ಧಿ ಐದುವ ತೆರದಿ ಜೀವರಿಗೆ ।।
ವನಜನಾಭನು ಸರ್ವರಸ ಉಂ।ಡುಣಿಸಿ ಸಂರಕ್ಷಿಸುವ ಜಾಹ್ನವಿ ।
ಜನಕ ಜನ್ಮಾದ್ಯಖಿಳದೋಷವಿದೂರ ಗಂಭೀರ ।। ।।೧೫-೨೫।।

ಆಸೆಗೋಳಗಾದವನು ಜನರಿಗೆ । ದಾಸನೆನಿಸುವನಾಸೆಯನು ನಿಜ ।
ದಾಸಗೈದಿಹ ಪುಂಸಗೆಲ್ಲರು ದಾಸರೆನಿಸುವರು ।।
ಶ್ರೀಶನಂಘ್ರಿ ಸರೋಜಯುಗಳ ನಿ।ರಾಶೆಯಿಂದಲಿ ಭಜಿಸಿ ಓಲಿದು ರ ।
ಮಾಸಹಿತ ತನ್ನನೆ ಕೊಡುವ ಕರುಣಾಸಮುದ್ರ ಹರಿ ।। ।।೧೫-೨೬।।

ದ್ಯುನದಿಯಾದ್ಯಂತವನು ಕಾಣದೆ । ಮನುಜ ಏಕತ್ರದಲಿ ತಾ ಮ ।
ಜ್ಜನವ ಗೈಯೆ ಸಮಸ್ತದೋಷದಿ ಮುಕ್ತನಹ ತೆರದಿ ।।
ಅನಘನಮಲಾನಂತಾನಂತ ಸು।ಗುಣಗಳೊಳಗೊಂದೆ ಗುಣೋಪಾ ।
ಸನವ ಗೈವ ಮಹಾತ್ಮ ಧನ್ಯ ಕೃತಾರ್ಥನೆನಿಸುವನು ।। ।।೧೫-೨೭।।

ವಾಸುದೇವನು ಕರೆಸುವನು ಕಾರ್ಪಾಸನಾಮದಿ ಸಂಕರುಷಣನು ।
ವಾಸವಾಗಿಹ ತೂಲದೊಳು ತಂತುಗನು ಪ್ರದ್ಯುಮ್ನ ॥
ವಾಸರೂಪನಿರುದ್ಧದೇವನು । ಭೂಷಣನು ತಾನಾಗಿ ತೋರ್ಪ ಪ ।
ರೇಶನಾರಾಯಣನು ಸರ್ವದ ಮಾನ್ಯ ಮಾನದನು ॥ ॥೧೫-೨೮॥

ಲಲನೆಯಿಂದೊಡಗೂಡಿ ಚೈಲಗಳೊಳಗೆ ಓತಪ್ರೋತರೂಪದಿ ।
ನೆಲೇಸಿಹನು ಚತುರಾತ್ಮಕ ಜಗನ್ನಾಥವಿಠ್ಠಲನು ॥
ಛಳಿ ಬಿಸಿಲು ಮಳೆಗಾಳಿಯಿಂದರ । ಘಳಿಗೆ ಬಿಡದಲೆ ಕಾವನೆಂದರಿ ।
ದಿಳೆಯೊಳರ್ಚಿಸುತಿರು ಸದಾ ಸರ್ವಾಂತರಾತ್ಮಕನ ॥ ॥೧೫-೨೯॥

oooooooooooooooooooooooooooooooo